

# ಹೊಟ್ಟೆ ಡುಬ್ಬಣ್ಣ ಸಲ್ಮಾನ್

■ ವಿಶಾಖ ಎನ್.

ಸಲ್ಮಾನ್ ಖಾನ್ ಲಾಗಾಯ್ತಿನಿಂದಲೂ ಫಿಟ್‌ನೆಸ್‌ಗೆ ಮಾದರಿ ಎನ್ನುವಂತೆ ಬದುಕಿದವರು. ಭುಜದ ಶಸ್ತ್ರಚಿಕಿತ್ಸೆಗೆ ಒಳಗಾದ ನಂತರ ಮಚ್ಚೆ ಹಾಗೇ ಇದ್ದರೂ ಅವರ ತೊಲೆಯಂಥ ತೋಳುಗಳ ಮಾಂಸಖಂಡಗಳನ್ನು ತೋರುವ ಪೋಸ್ಟರ್‌ಗಳನ್ನು ಹಚ್ಚಿಕೊಂಡ ಜಿಮ್‌ಗಳಿಗೆ ಲೆಕ್ಕವಿಲ್ಲ. ಐವತ್ತು ದಾಟಿದ ನಂತರವೂ ಇಂತಹ ಅಂಗಸೌಷ್ಠವ ಕಾಪಾಡಿಕೊಳ್ಳುವ ನಟರು ವಿರಳ.

ಇಂತಿಪ್ಪ ಸಲ್ಮಾನ್ ಖಾನ್ ಕೂಡ ಫಿಟ್‌ನೆಸ್‌ಗೆ ಸಂಬಂಧಿಸಿದಂತೆಯೇ ಟ್ರೋಲ್‌ಗೆ ಒಳಗಾದ ಪ್ರಸಂಗ ಇತ್ತೀಚೆಗೆ ನಡೆಯಿತು. 'ದಬಂಗ್' ಚಿತ್ರದ ಪ್ರವಾಸಕ್ಕಾಗಿ ಅವರು ಆ ಸಿನಿಮಾದ ಗೀತೆಯೊಂದರ ನೃತ್ಯವನ್ನು ಇತ್ತೀಚೆಗೆ ರಿಹರ್ಸಲ್ ಮಾಡುತ್ತಿದ್ದರು. 'ಪಾಂಡೆ ಕೆ ಶೀಟಿ' ಎಂಬ ಜನಪ್ರಿಯ ಹಾಡಿಗೆ ಅವರು ಹೆಜ್ಜೆ ಹಾಕುವುದನ್ನು ಅಭ್ಯಾಸ ಮಾಡುತ್ತಿದ್ದಾಗ ಅವರ ದಪ್ಪ ಹೊಟ್ಟೆ ಕಾಣುತ್ತಿತ್ತು. ಕಪ್ಪು ಟಿ–ಶರ್ಟ್ ಹಾಗೂ ಅದೇ ಬಣ್ಣದ ಜಾಕೆಟ್ ಹಾಕಿದ್ದ ಅವರು, ಡೆನಿಮ್ ಪ್ಯಾಂಟ್ ಧರಿಸಿದ್ದರು. ಇನ್‌ಸ್ಟಾಗ್ರಾಂನಲ್ಲಿ ಅವರ ತಾಲೀಮಿನ ಚುಟುಕು ವಿಡಿಯೊವನ್ನು ಅಪ್‌ಲೋಡ್ ಮಾಡಲಾಗಿತ್ತು.

'ಸಲ್ಲು ಭಾಯ್... ನಿಮ್ಮ ಪ್ಯಾಕ್‌ಗಳೇನಾದವು... ಫ್ಯಾಮಿಲಿ ಪ್ಯಾಕ್ ಆಗಿಬಿಟ್ಟಿದೆಯಲ್ಲವೇ?' ಎಂಬ ಧಾಟಿಯಲ್ಲಿ ಅಭಿಮಾನಿಯೊಬ್ಬರು ಟ್ರೋಲ್ ಮಾಡಿದ್ದಾರೆ. ಅದನ್ನು ಓದಿದ ಅನೇಕರು ಸಲ್ಮಾನ್ ಹೊಟ್ಟೆ ಊದಿಕೊಂಡಿರುವ ಕುರಿತು ತಮ್ಮದೇ ಆದ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ.

'ಬಿಗ್ ಬಾಸ್' ರಿಯಾಲಿಟಿ ಶೋದ 15ನೇ ಆವೃತ್ತಿಯನ್ನು ನಡೆಸಿಕೊಡುತ್ತಿರುವ ಸಲ್ಮಾನ್, ಇತ್ತೀಚೆಗಷ್ಟೆ 'ಆರ್‌ಆರ್‌ಆರ್' ಚಿತ್ರತಂಡದ ರಾಜಮೌಳಿ, ಜೂನಿಯರ್ ಎನ್‌ಟಿಆರ್ ಹಾಗೂ ರಾಮ್‌ಚರಣ್ ಜತೆ ವಿಶೇಷ ಸಂಚಿಕೆಯಲ್ಲಿ ಕಾಣಿಸಿಕೊಂಡಿದ್ದರು.

'ಟೈಗರ್ 3' ಚಿತ್ರದಲ್ಲಿ ಅಭಿನಯಿಸುತ್ತಿರುವ ಸಲ್ಮಾನ್, ಮತ್ತೆ ಆ ಚಿತ್ರದಲ್ಲಿ ಕತ್ರಿನಾ ಅವರಿಗೆ ಜೋಡಿಯಾಗಿದ್ದಾರೆ. ಜಿಮ್‌ನಲ್ಲಿ ವ್ಯಾಯಾಮ ಮಾಡುವುದನ್ನು ತಮ್ಮ ಬದುಕಿನ ಭಾಗವೇ ಆಗಿಸಿಕೊಂಡಿರುವ ಅವರು ಹೊಟ್ಟೆ ಅಷ್ಟು ದಪ್ಪ ಆಗಲು ಬಿಟ್ಟಿದ್ದು ಯಾಕೋ ಎನ್ನುವ ಪ್ರಶ್ನೆಯನ್ನೂ ಕೆಲವು ಅಭಿಮಾನಿಗಳು ಎತ್ತಿದ್ದಾರೆ. ಯಾವುದಾದರೂ ಪಾತ್ರಕ್ಕಾಗಿ ಹಾಗೆ ಮಾಡಿಕೊಂಡಿರಬೇಕು ಎಂಬ ಅನುಮಾನವನ್ನೂ ಕೆಲವರು ವ್ಯಕ್ತಪಡಿಸಿದ್ದಾರೆ.

ಫಿಟ್‌ನೆಸ್ ವಿಷಯದಲ್ಲಿ ರಾಜಿಯೇ ಆಗದ ಸಲ್ಮಾನ್ ಮಾತ್ರ ತಮ್ಮ ಹೊಟ್ಟೆ ದಪ್ಪಗಾಗಿರುವುದರ ಬಗೆಗೆ ಏನನ್ನೂ ಪ್ರತಿಕ್ರಿಯಿಸಿಲ್ಲ. ನೃತ್ಯದ ರಿಹರ್ಸಲ್‌ನಲ್ಲಷ್ಟೆ ತನ್ಮಯರಾಗಿದ್ದಾರೆ. ■

# ಜೂಲನ್ ಆಗಿ ಅನುಷ್ಕಾ

ಜೂಲನ್ ಗೋಸ್ವಾಮಿ ಭಾರತ ಮಹಿಳೆಯರ ಕ್ರಿಕೆಟ್ ತಂಡಕ್ಕೆ ಜೀವಾನಿಲ ತಂದ ನಾಯಕಿ. ಅವರ ಕಾಲದಲ್ಲಿ ದೇಶದ ಮಹಿಳಾ ಕ್ರಿಕೆಟ್‌ನ ಪುನರುತ್ಥಾನವಾಯಿತೆಂದು ಕೆಲವರು ಹೇಳುತ್ತಿರುತ್ತಾರೆ. ಈ ಹೆಣ್ಣುಮಗಳ ಸಾಧನೆಯ ಹೂರಣವನ್ನೇ ಆಧರಿಸಿದ 'ಚಕ್‌ದಾ ಎಕ್ಸ್‌ಪ್ರೆಸ್' ಎಂಬ ಹಿಂದಿ ಚಿತ್ರ ನೆಟ್‌ಫ್ಲಿಕ್ಸ್ ಒಟಿಟಿಗಾಗಿ ಸಿದ್ಧಗೊಳ್ಳುತ್ತಿದೆ. ಅದರ ಟೀಸರ್ ಇತ್ತೀಚೆಗೆ ಬಿಡುಗಡೆಯಾಯಿತು. ವಿರಾಟ್ ಕೊಹ್ಲಿ ಪತ್ನಿ ಅನುಷ್ಕಾ ಶರ್ಮ ಈ ಚಿತ್ರದಲ್ಲಿ ಜೂಲನ್ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ.

ಅನುಷ್ಕಾ ಸಹೋದರ ಕರ್ಣೇಶ್ ಶರ್ಮ ಕ್ಲೀನ್‌ಸ್ಲೇಟ್ಸ್ ಫಿಲ್ಮ್ಸ್ ಎಂಬ ನಿರ್ಮಾಣ ಸಂಸ್ಥೆಯ ಸಹ ಪಾಲುದಾರ. ಅನುಷ್ಕಾ ಕೂಡ ಇದರ ಪಾಲುದಾರರು. ಈ ಸಂಸ್ಥೆಯಿಂದ ಚಿತ್ರ ತಯಾರಾಗುತ್ತಿದೆ. ಪ್ರೊಸಿತ್ ರಾಯ್ ನಿರ್ದೇಶನವಿರುವ ಈ ಸಿನಿಮಾಗೆ ಅಭಿಷೇಕ್ ಬ್ಯಾನರ್ಜಿ ಕಥೆ ಹಾಗೂ ಚಿತ್ರಕಥೆಯನ್ನು ಬರೆದಿದ್ದಾರೆ.

ಪುರುಷ ಕ್ರಿಕೆಟ್ ತಂಡದ ಆಟಗಾರರು ಬಳಸಿದ ಟಿ–ಶರ್ಟ್‌ಗಳನ್ನು, ಪುರುಷ ಆಟಗಾರರ ಹೆಸರುಗಳ ಮೇಲೆ ಮಹಿಳಾ ಕ್ರಿಕೆಟಿಗರ ಹೆಸರುಗಳನ್ನು ಅಂಟಿಸಿ, ಮರುಬಳಕೆ ಮಾಡುವ ದೃಶ್ಯವೊಂದು ಟೀಸರ್‌ನಲ್ಲಿದೆ. ಮಹಿಳಾ ಕ್ರಿಕೆಟ್ ತಂಡ ಎಂತಹ ದುಃಸ್ಥಿತಿಯಲ್ಲಿ ಆಡಿ ಆಮೇಲೆ ಹೆಸರು ಮಾಡಿತೆನ್ನುವುದನ್ನು ಹೇಳಲು ಈ ದೃಶ್ಯ ಬಳಕೆಯಾಗಿರುವುದು ಸ್ಪಷ್ಟ.

'ಜೂಲನ್ ಬದುಕು ಸ್ಫೂರ್ತಿದಾಯಕ. ತನ್ನ ಸುತ್ತಮುತ್ತಲಿನವರು ಮಹಿಳೆಯರು ಕ್ರಿಕೆಟ್ ಆಡುವುದನ್ನು ಅನುಮಾನದಿಂದ, ಅನಿಶ್ಚಿತತೆಯಿಂದ ನೋಡುತ್ತಿದ್ದ ಕಾಲದಲ್ಲಿ ಅವರು ಆಡಿ, ಗೆದ್ದವರು. ಅಂತಹ ಬದುಕನ್ನು ಜನರಿಗೆ ತೋರಿಸುವ ಪ್ರಯತ್ನವಿದು' ಎಂದು ಅನುಷ್ಕಾ ಹೇಳಿಕೊಂಡಿದ್ದಾರೆ.

ಖುದ್ದು ಜೂಲನ್ ಕೂಡ ಟೀಸರ್ ಅನ್ನು ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಂಡಿದ್ದು, 'ಮೊದಲು ನಾವು ಕಾಣಿಸಿಕೊಂಡೆವು. ಆಮೇಲೆ ನಮ್ಮ ಆಟದ ಕುರಿತು ಜನ ಮಾತನಾಡಿದರು' ಎಂದು ಚುಟುಕಾಗಿ ಉತ್ತರ ನೀಡಿದ್ದಾರೆ.

'83' ಚಿತ್ರ ತನ್ನ ಗಟ್ಟಿತನದಿಂದ ಗುರ್ತಿಸಿಕೊಂಡಿರುವಾಗ ಇನ್ನೊಂದು ಕ್ರೀಡಾಚಿತ್ರ ಮೂಡಿ ಬರಲಿರುವುದು ಆಸಕ್ತಿಕರ. ■

